KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 21-09-2024**
**ಚಾ.ಸಾ-17**
**ಫ್ರಾ.ಸಾ-9**

| | |
|---|---|
| ಹೆಸರು | ಬಸವರಾಜು |
| ತಂದೆ ಹೆಸರು | ಜೆಟ್ಟಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಆಲ್ಬೂರು |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-1 ಸುಮಾ ಗೊತ್ತು, ಅವರು ನನ್ನ ತಾಯಿಯ ಚಿಕ್ಕಮ್ಮನ ಮಗಳು. ಮೃತ ಸುರೇಶ್ ನನಗೆ ಗೊತ್ತು. ಅವರು ಸುಮಾರು ಐದು ವರ್ಷಗಳ ಹಿಂದೆ ಮೃತರಾಗಿದ್ದಾರೆಂದು ತಿಳಿಯಿತು. ಮೃತ ಸುರೇಶ್ ರವರ ಪಕ್ಕದ ಮನೆಯವರು ನನಗೆ ಫೋನ್ ಮಾಡಿ ತಿಳಿಸಿದ್ದರು. ಆಗ ನಾನು ತುರುವೇಕೆರೆಯ ಸರ್ಕಾರಿ ಆಸ್ಪತ್ರೆಗೆ ಹೋದೆ. ಅಲ್ಲಿಂದ ತುಮಕೂರಿನ ಆಸ್ಪತ್ರೆಯ ಶವಗಾರಕ್ಕೆ ಹೋದೆ. ಸುರೇಶ್ ರವರನ್ನು ನೋಡಿದೆ. ಮೃತ ಪಟ್ಟಿದ್ರು. ಅವರ ಮೈಮೇಲೆ ಯಾವ ಯಾವ ಗಾಯಗಳಾಗಿದ್ವು ನಾನು ನೋಡಿಲ್ಲ. ಸುರೇಶ್ ರವರು ಹೇಗೆ ಮೃತ ಪಟ್ಟರು ಎಂದು ನಾನು ಅವರ ಮನೆಯವರಿಂದಾಗಲೀ ಅಥವಾ ಊರಿನವರಿಂದಾಗಲೀ ಕೇಳಿ ತಿಳಿದುಕೊಳ್ಳಲಿಲ್ಲ. ನಾನು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 17.02.2019 ರಂದು ಬೆಳಗ್ಗೆ 7 ಗಂಟೆ ಸಮಯಕ್ಕೆ ನಾನು ಮನೆಯಲ್ಲಿರುವಾಗ ನಮ್ಮೂರಿನ ರಾಮ ಮಂದಿರದ ಬಳಿ ಸುರೇಶ್ ತಲೆಗೆ ರಕ್ತ ಗಾಯವಾಗಿ ಬಿದ್ದಿದ್ದಾರೆಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. ನಾನು ಅಲ್ಲಿಗೆ ಹೋಗಿ ನೋಡಲಾಗಿ ರಾಮ ಮಂದಿರದ ಹತ್ತಿರ ಗೋಡೆಗೆ ಒರಗಿಕೊಂಡು ಸುರೇಶ್ ಕುಳಿತಿದ್ದು ಆತನ ತಲೆಯ ಎಡಭಾಗಕ್ಕೆ ಮೂರು ಕಡೆ ಬಲವಾದ ಆಯುಧದಿಂದ ಬುರುಡೆ ಜಜ್ಜಿ ಹೋಗುವಂತೆ ಹೊಡೆದು ರಕ್ತ ಗಾಯ ಪಡಿಸಿದ್ರು ಎಂದರೆ ಸರಿಯಲ್ಲ. ಆತನ ಎರಡೂ ಕಣ್ಣು ಸಹಾ ಊತ ಆಗಿತ್ತು ಎಂದರೆ ಸರಿಯಲ್ಲ. ವಿಚಾರಿಸಲಾಗಿ ದಿನಾಂಕ 16.02.2019 ರಂದು ರಾತ್ರಿ 7.45 ರ ಸಮಯದಲ್ಲಿ ಮನೆಯಲ್ಲಿ ಊಟ ಮಾಡುತ್ತಿರುವಾಗ ಯಾವುದೋ ಫೋನ್ ಬಂದಿದ್ದರಿಂದ ಊಟ ಮುಗಿಸಿ, ಹೋಗಿ ಬರುತ್ತೇನೆಂದು ಪತ್ನಿಗೆ ಹೇಳಿ ಹೊರಟಿದ್ದನೆಂದು ನನಗೆ ತಿಳಿಯಿತು ಎಂದರೆ ಸರಿಯಲ್ಲ. 8.30 ಸಮಯಕ್ಕೆ ಸುಮಾಳಿಗೆ ಫೋನ್ ಮಾಡಿದ್ದು ಸುಮಾ ಹಲೋ ಎಂದ ತಕ್ಷಣ ಫೋನ್ ಕಟ್ಟಾಗಿರುತ್ತದೆ ಎಂದು, ಕೆಲಸ ಮುಗಿದ ತಕ್ಷಣ ಬರಬಹುದು ಎಂದು ಹಾಗೆ ಮಲಗಿಕೊಂಡಿದ್ದು, ದಿನಾಂಕ 16.02.2019 ರಂದು ರಾತ್ರಿ 8 ಗಂಟೆಯಿಂದ ದಿನಾಂಕ 17.02.2019 ರಂದು ಬೆಳಗ್ಗೆ 7 ಗಂಟೆಯ ಮಧ್ಯೆ ಯಾವುದೋ ಸಮಯದಲ್ಲಿ ಸುರೇಶ್ ನ ತಲೆಯ ಎಡಭಾಗಕ್ಕೆ ಯಾವುದೋ ಬಲವಾದ ಆಯುಧದಿಂದ ಕೊಲೆ ಮಾಡಿ ಕೃತ್ಯವನ್ನು ಮರೆಮಾಡಿದ್ದಾಗಿ ಕಂಡು ಬಂತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸ್ ನವರಿಗೆ ಈಗ ಓದಿ ಹೇಳಿದಂತೆ ನಾನು ಮೇಲ್ಕಂಡ ವಿಳಾಸದಲ್ಲಿ ----- ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. (ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು).

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**